ಶ್ರೀ ಆರ್. ವಿ ದೇಶಪಾಂಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಚಿಕ್ಕನಾಯ್ಕನಹಳ್ಳಿ ಅಸಿಸ್ಟೆಂಟ್ ಇಂಜಿನಿಯರ್ ವೇಲೆ ಕೆಲವು ದೂರುಗಳನ್ನು ಮಾಡಿದ್ದಾರೆ. ತುಮಕೂರು ಜಿಲ್ಲಾ ಪರಿಷತ್ತಿನಿಂದ ವರದಿ ತರಿಸಿಕೊಂಡು ಆ ವರದಿ ಯಾವ ರೀತಿಯಲ್ಲಿ ಬರುತ್ತದೆಯೋ ಆ ಪ್ರಕಾರ ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳುತ್ತದೆ.

ವಿತ್ತೀಯ ಕಾರ್ಯಕಲಾಪಗಳು

೧೯೮೮–೮೯ನೇ ಸಾಲಿಗೆ ಸಂಬಂಧಿಸಿದ ಅನುದಾನಗಳ ಬೇಡಿಕೆಯ ಮೇಲಿನ ಚರ್ಚೆ

ಬೇಡಿಕೆ ಕ್ರಮ ಸಂಖ್ಯೆ ೫೬. ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು)

೯—ಸಹಕಾರಿ ಉದ್ಯಮಗಳು

೫೭—ಕ್ರಮಪಡಿಸಿದ ಮಾರುಕಟ್ಟೆಗಳು

೫೪–೨—ಧಾರ್ಮಿಕ ದತ್ತಿಗಳು, ಮಿಷ್ಕಿ, ಭೂ ಅಭಿವೃದ್ಧಿ ಹಾಗೂ ಕ್ರಮಪಡಿಸಿದ ಮಾರುಕಟ್ಟೆಗಳು.

ಶ್ರೀ ಎಚ್. ವಿಕಾಂತಯ್ಯ (ಸಹಕಾರಿ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರ (ಕ್ರಮಪಡಿಸಿದ ಮಾರುಕಟ್ಟೆಗಳ ಹೊರತು) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪೂರೈಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೪,೧೨,೫೬,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫೪,೪೨,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಮಂಜೂರು ಮಾಡಬೇಕೆಂದು ಮಂಡಿಸಲು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಬೇಡಿಕೆಗಳನ್ನು ಮಂಡಿಸಲಾಯಿತು.

ಶ್ರೀ ಆರ್. ಬಿ. ಪೋತ್ದಾರ್. (ಕೈಗಾರಿಕಾ ಸಹಕಾರ ಮಂತ್ರಿಗಳು).—ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಹಕಾರಿ ಉದ್ಯಮ ಸಂದಾಯ ಮಾಡುವಲ್ಲಿ ಬರತಕ್ಕ ವೆಚ್ಚವನ್ನು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨,೬೭,೨೬,೦೦೦ ರೂಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೫೭,೪೪,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವು ಸೇರಿದಂತೆ ಮಂಜೂರು ಮಾಡಬೇಕೆಂದು ಮಂಡಿಸಲು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಬೇಡಿಕೆಗಳನ್ನು ಮಂಡಿಸಲಾಯಿತು.

ಶ್ರೀ ಕೆ. ಆಮರನಾಥ ಶೆಟ್ಟಿ. (ಧಾರ್ಮಿಕ ದತ್ತಿಗಳು ಮಿಷ್ಕಿ ಭೂ ಅಭಿವೃದ್ಧಿ ಹಾಗೂ ಕ್ರಮಪಡಿಸಿದ ಮಾರುಕಟ್ಟೆಗಳ ರಾಜ್ಯ ಮಂತ್ರಿ).—ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಮಿಷ್ಕಿ ಭೂಮಿ ಅಭಿವೃದ್ಧಿ ಸಂದಾಯ ಮಾಡುವಲ್ಲಿ ೬,೦೩,೯೫,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರುಮಾಡಬೇಕೆಂದು ಮಂಡಿಸಲು ನಾನು ಭಿನ್ನವಿಸಿಕೊಳ್ಳುತ್ತೇನೆ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಪೆಂತೀಯ ಮತ್ತು ಧರ್ಮಾದಾಯ ಕಂಸ್ಥೆಗಳು ಇತ್ಯಾದಿ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪೂರೈಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧೧,೮೭,೭೨,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಮಂಡಿಸಲು ನಾನು ಭಿನ್ನವಿಸಿಕೊಳ್ಳುತ್ತೇನೆ.

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩೧೧೯೬೯ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕ್ರಮವಹಿಸಿದ ಮಾರುಕಟ್ಟೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೯,೦೮,೧೯೦೦ ರೂಪಾಯಿಗಳಿಗಿಂತ ಮಿಗಾರದ ಮೊತ್ತವನ್ನು ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಮಂಜೂರು ಮಾಡಬೇಕೆಂದು ಮಂಡಿಸಲು ನಾನು ಭಿನ್ನವಿಸಿಕೊಳ್ಳುತ್ತೇನೆ.

ಅಧ್ಯಕ್ಷರು.—ಬೇಡಿಕೆಗಳನ್ನು ಮಂಡಿಸಲಾಗಿದೆ.

ಈಗ ಮಾನ್ಯ ಶ್ರೀ ಕೆ. ಎಚ್. ಪಾಟೀಲರಿಂದ ಚರ್ಚೆ ಪ್ರಾರಂಭ.

SRI K. H. PATIL.—Today appears to be a very non-Co-operative day. Can we start it tomorrow ?

ಅಧ್ಯಕ್ಷರು.—ಇಲ್ಲ, ತಾವು ಪ್ರಾರಂಭ ಮಾಡಿ. ಒಂದು ತಾಸಾದರೂ ಮಾತನಾಡಿ.

ಶ್ರೀ ಎಂ. ಎಸ್. ಪಾಟೀಲ್.—೫ ಗಂಟೆಗೆ ಪಾರ್ಟಿ ಮೀಟಿಂಗ ಇದೆ.

ಶ್ರೀ ಕೆ. ಎಚ್. ಪಾಟೀಲ್.—ತಮ್ಮ ಆದೇಶವನ್ನು ನಾನು ಪಾಲಿಸುತ್ತೇನೆ. ೫ ಮಿನಿಟ್ ಮಾತನಾಡಿ ಬಿಡುತ್ತೇನೆ. ಯಾರಿಗೂ ತೊಂದರೆ ಆಗುವುದು ಬೇಡ,

ಅಧ್ಯಕ್ಷರು.—ತಾವು ಪ್ರಾರಂಭ ಮಾಡಿ.

† ಶ್ರೀ ಕೆ.ಎಚ್. ಪಾಟೀಲ್ (ಗದಗ್).—ಮಾನ್ಯ ಅಧ್ಯಕ್ಷರೇ, ಈ ಸಹಕಾರಿ ಇಲಾಖೆ ಬೇಡಿಕೆ ವಿಷಯವಾಗಿ ನಾವು ಮಾತನಾಡುವುದಕ್ಕಿಂತಲೂ ಪೂರ್ವದಲ್ಲಿ ಸಹಕಾರಿ ಚಳುವಳಿಯ ಪೂರ್ಣ ವಿಹಂಗಮ ನೋಟ ಅತ್ಯಂತ ಅವಶ್ಯಕ. ನಮ್ಮ ದೇಶದ ನೇತಾರರಾದ ಫಾದರ್ ಆಫ್ ದಿ ನೇಷನ್ ಮಹಾತ್ಮಾ ಗಾಂಧೀಜಿಯವರು ಏನು ಹೇಳಿದ್ದರು ಎನ್ನುವ ಮಾತನ್ನು ಇವತ್ತು ನೆನಪಿನಲ್ಲಿ ತರಬೇಕು. ಅವರು ಏನು ಹೇಳಿದ್ದಾರೆ ?

The father of the Nation, Mahatma Gandi has said: –

> "India vests in Rural India. India's economy depends upon the Rural economy, where the population is nearly 83."

ಈ ಮಾತನ್ನು ನಾವು ನೆನಪಿನಲ್ಲಿಟ್ಟುಕೊಂಡಾಗ ನಾವು ಎಷ್ಟರಮಟ್ಟಿಗೆ ಸಾಧನೆಯನ್ನು ಸಾಧಿಸಿದ್ದೇವೆ ಎಂಬುದು ನಮ್ಮ ಗಮನಕ್ಕೆ ಬರುತ್ತದೆ. ಅದೇ ರೀತಿಯಾಗಿ ಮತ್ತೊಮ್ಮೆ ಮಹಾತ್ಮ ಗಾಂಧೀಜಿಯವರು ಸಹಕಾರಿ ವಿವೇಚನೆ ಮಾಡುವಾಗ ಹೇಳಿದ್ದಾರೆ.

> "Gandhiji spoke of co-operative societies as "ideally suited organisations" for "promoting group efforts by villagers". His protege and the main architect of modern India, Pandit Jawaharlal Neharu, emphasised. "In the economic structure of India, Co-operation is not even a free choice, it is a necessity."
>
> In the Constitution, we have said under Directive Principles.
>
> "The State shall endeavour to secure by suitable legislation or economic organisation or in any other way, to all workers, agricultural, industrial or otherwise, work, a living wage, conditions of work ensuring a decent standard of life and full enjoyment of leisure and social and cultural opportunities and, in particular, the State shall endeavour

to promote cottage industries on an individual or co-operative basis in rural areas."

The Industrial Policy Resolution (1959) of the Central Government, stipulates that "the principle of co-operation should be applied wherever possible and a steadily increasing proportion of the activites of the private sector developed on co-operative lines.

Dr. K.N. Katju tried to explain Co-operation very clearly in the context of Indian conditions, where credit societies claimed a major share in the movement.

"Co-operation is a self help as well as mutual help. It is a Joint enterprise of those who are not financially strong and cannot stand on their own legs and, therefore, come together not with a view to getting profits but to overcome disability arising out of want of adequate financial resources and thus better their economic condition."

The Maclagan Committee described Co-operation thus:

"The theory of Co-operation is, very briefly, that an isolated and powerless man can, by association with others and by moral development and mutual support, obtain, in his degree, the material advantage available to the wealthy and powerful persons, and thereby develop himself to the fullest extent of his natural abilities.'

"By the union of forces material advancement is secured, and by united action self-reliane is fostered, and it is from the interaction of these influences that it is hoped to attain the effective realisation of the higher and more prosperous standard of life which has been characterised as "better business, better farming and better living."

೫-೦೦ ಪಿ. ಎಂ:

ಆದಾದ ನಂತರ ಇಂಟರ್‌ನ್ಯಾಷನಲ್ ಕೋಆಪರೇಟಿವ್ ಅಲಿಯನ್ಸ್‌ನವರು ೧೯೬೫ರಲ್ಲಿ ಇದೆಲ್ಲ ಮಾತುಗಳನ್ನು ಕನ್ಸಿಡರ್ ಮಾಡಿ ಇಂದಿಯಾದ ಸಲುವಾಗಿ ಇದನ್ನು ಮಾಡಿದರು They appointed a Commission to formulate fundamental principles of co-operation. ಆ ಕಮಿಟಿಯವರು ಏನು ಮಾಡಿದರು ಎಂದರೆ the Commission recommended that the following should be considered as most essential to genuine and effective co-operative practices ಈಗ ನಾವು Whether we have followed ಏನನ್ನು ನೋಡಬೇಕಾಗಿದೆ ಎಂದರೆ voluntarily and open membership, democratic control, limited interest and share capital, patronaged dividend promotion of education and mutuality. ಇಷ್ಟು ಮಾತುಗಳನ್ನು ನಾವು ಅಪಲೋಕಿಸಬೇಕು. ಬಿಲೀ ಸಹಕಾರ ಎಂದರೆ ರಿಪೋರ್ಟ್ ಇಟ್ಟುಕೊಂಡು ೧೦ ಆಣೆ, ೧೦ ಆಣೆ ಆಗಿದೆ ಡಿಫಿಸಿಯೆನ್ಸಿ ಇದೆ ಎಂದು ಹೇಳಿದರೆ ಉಪಯೋಗ ಇಲ್ಲ. Whether your Government has followed really and sincerely the principles involed in this

co-operative movement ? ಈ ಮಾತನ್ನು ನಾವು ಬಹಳ ಲಕ್ಷ್ಯಪೂರ್ವಕವಾಗಿ ನೋಡ ಬೇಕಾಗಿದೆ. ಇವತ್ತು ಮಾನ್ಯ ಸಹಕಾರ ಸಚಿವರಾಗಲೀ, ಸಹಕಾರ ಖಾತೆಯ ಅಧಿಕಾರಿಗಳಾಗಲೀ ರಿಕವರಿ ಆಫೀಸರ್ಸ್, ಪ್ರಾಸಿಕ್ಯೂಟರ್ಸ್ ಆಗಬಾರದು. ಇದರ ಬಗ್ಗೆ ನಾನು ನಂತರ ಹೇಳುತ್ತೇನೆ. ಮಾನ್ಯ ಅಧ್ಯಕ್ಷರೇ ತಮಗೆ ಗೊತ್ತಿದೆ, ಸಹಕಾರಿಗಳಲ್ಲಿ ಅತ್ಯಂತ ಶ್ರೇಷ್ಠತೆಯನ್ನು ಪಡೆದಿರತಕ್ಕಂಥ ವೈಕುಂಠಬಾಯಿ ಮೆಹತಾ ಅವರು ೧೯೫೯ರಲ್ಲಿ ಹುಲಕೋಟಿಗೆ ಒಂದು ಎಜ್ಯುಕೇಷನಲ್ ಸೊಸೈಟಿಯ ಜುಬಿಲಿ ಸಮಾರಂಭಕ್ಕೆ ಬಂದಾಗ ಒಂದು ಮಾತನ್ನು ಹೇಳಿದ್ದರು. ಆಗ ಅವರು ಕೋಆಪರೇಷನ್ ಮಿನಿಸ್ಟರ್ ಆಗಿದ್ದರು. I shall be the happyest man in the world when there is no co-operative department and when there is no Co-operation Minister in the Government.

ಆದರ ಅರ್ಥ ಏನು ಎಂದರೆ ಜನರು ತಮ್ಮಿದೇ ಆದಂಥ ಆಡಳಿತವನ್ನು ತಮ್ಮಕಾಲ ಮೇಲೆ ಮಾಡಿ ತಮ್ಮಿದೇ ಆದಂಥ ರೀತಿಯಲ್ಲಿ ಆಡಳಿತ ವ್ಯವಸ್ಥೆ ಮಾಡುವುದು ಅವರಿಗೆ ಬೇಕಿತ್ತು. ಆ ಸ್ಥಿತಿಯಲ್ಲಿ, ಮತ್ತು ಇವತ್ತಿನ ಸ್ಥಿತಿ ಎಲ್ಲಿದೆ ಎಂದು ನೋಡಿದರೆ ೧೯೦೫ರಲ್ಲಿ, ೧೬೧೨ರಲ್ಲಿ ಆಕ್ಟ್ ಆಯಿತು. ೧೯೨೫ ರಲ್ಲಿ ಆಯಿತು. ೧೯೩೬ರಲ್ಲಿ ಆಯಿತು. ೧೯೫೬ರಲ್ಲಿ ರೂರಲ್ ಕ್ರೆಡಿಟ್ ಸರ್ವೆ ರಿಪೋರ್ಟ್ ಆಯಿತು. ಇದನ್ನೆಲ್ಲಾ ನೋಡಿದಮೇಲೆ ಅವರು ಏನು ಹೇಳ್ದಾರೆ ಎಂದರೆ ನಾವು ಏನು ಪ್ರಾಥಮಿಕ ಸ್ಥಾನದಲ್ಲಿ ದ್ದೇವೋ ಅದರ ಕೆಳಮಟ್ಟಕ್ಕೆ ಹೋಗಿದ್ದೇವೆಯೇ ಹೊರತು ಮೇಲ್ಮಟ್ಟಕ್ಕೆ ಬಂದಿಲ್ಲ. ನಾನು ಮಾನ್ಯ ಮಂಶ್ರಿಗಳನ್ನು ಒಬ್ಬರನ್ನೆ ದೂಷಣೆ ಮಾಡುವುದಿಲ್ಲ. ಏಕೆಂದರೆ ಅವರು ಹೊಸದಾಗಿ ಬಂದಿದ್ದಾರೆ. ಅವರು ಈ ಸಹಕಾರವನ್ನು ಚೆನ್ನಾಗಿ ತಿಳಿಯಬೇಕೆಂದು ನಾನು ಆಸೆ ಮಾಡುತ್ತೇನೆ. ಈ ದಿಸೆಯಲ್ಲಿ ನಾವು ಮುಂದುವರೆಯಬೇಕು. ಆವಾಗ ನಿಜವಾದ ಸಹಕಾರ ತನ್ನದೇ ಆದ ರೀತಿಯಲ್ಲಿ ಮಾರ್ಗವನ್ನು ಅನುಸರಿಸಲಿಕ್ಕೆ ಆಗುತ್ತದೆ. ಕರ್ನಾಟಕ ರಾಜ್ಯ ಬಹಳ ಉತ್ತಮವಾದಂಥ ರಾಜ್ಯ. ಇಲ್ಲಿರತಕ್ಕಂಥ ನೈಸರ್ಗಿಕ ಸಂಪತ್ತು ಇನ್ನು ಎಲ್ಲಿಯೂ ಸಿಗುವುದಿಲ್ಲ. ಕರ್ನಾಟಕ ರಾಜ್ಯದಲ್ಲಿರತಕ್ಕಂಥ ಜನ ಬಹಳ ಉತ್ತಮವಾದ ಜನ. ಏನು ಮಾಡಿದರೂ ಸುಮ್ಮನೆ ಇರುವಂಥ ಜನ. ಎಷ್ಟು ಅನ್ಯಾಯ ಮಾಡಿದರೂ ಸಹನೆ ಮಾಡುವಂಥ ಜನ, ಇವರು ಶಾಂತಿ ಪ್ರಿಯತೆಗೆ ಹೆಸರಾಗಿದ್ದಾರೆ. ಇದೇನು ಕೆ.ಎಚ್. ಪಾಟೀಲರು ಹೀಗೆ ಹೇಳುತ್ತಿದ್ದಾರೆ ಎಂದರೆ ಇದು ನಾನು ಹೇಳಿದ್ದದು ಅಲ್ಲ. ಮಹಾತ್ಮಾಗಾಂಧಿಯವರು ಹೇಳಿದ ಮಾತು ಇದು. ಕರ್ನಾಟಕ ನನ್ನ ಪ್ರಾಂತ್ಯವೆಂದು ಹೇಳಿದರು ಅವರು ಇದನ್ನು ನೋಡಿದರೆ ನಾವು ಇವತ್ತಿನದಿವಸ ಜನತೆಯ ಸೌಜನ್ಯತೆಯ ಉಪಯೋಗವನ್ನು ಸರಿಯಾಗಿ ಮಾಡಿಕೊಳ್ಳುತ್ತಿದ್ದೇವೆಯೆ ? ನಮ್ಮ ನೈಸರ್ಗಿಕವಾದಂಥ ಸಂಪತ್ತನ್ನು ಸದುಪಯೋಗ ಮಾಡುತ್ತಿದ್ದೇವೆಯೇ ? ನಾವು ನಿಜವಾದ ಸಹಕಾರಿಗಳಾಗಿ ಜೀವನವನ್ನು ಸಾಗಿಸುತ್ತಿದ್ದೇವೆಯೆ ? ಇದರೊಳಗೆ ಏನು ಹೇಳಿದ್ದಾರೆ ಎಂದರೆ, ಯಾವ ಮನುಷ್ಯ ತನ್ನ ಕಾಲಮೇಲೆ ನಿಲ್ಲುವುದಕ್ಕೆ ಸಾಧ್ಯವಿಲ್ಲ, ಅಂತಹ ಬಡವ ಮತ್ತು ಶ್ರೀಮಂತ ಹೊಂದಾಣಿಕೆಯಿಂದ ಕೂಡಿ ತನ್ನ ಸೇವೆಯನ್ನು ಆದಕ್ಕೆ ಸಮರ್ಪಿಸಿ ಅವನ ಹಣ ಮತ್ತು ತನ್ನ ಸೇವೆಯ ಎರಡರ ಲಾಭವನ್ನು ಪಡೆದು ತನ್ನ ಕಾಲಮೇಲೆ ನಿಲ್ಲುವಂಥ ಸ್ವಾಭಿಮಾನ ಅವನಿಗೆ ಬರುವುದಕ್ಕಾಗಿ ಈ ಸಹಕಾರ ಸಂಘ ಇದೆ. ಈ ರೀತಿಯಾಗಿ ಯಾವುದನ್ನು ಮಾಡಿದ್ದೇವೆ ಎಂದು ನೋಡುವಂಥ ಸ್ಥಿತಿಯೊಳಗೆ ನಾವು ಹೋಗೋಣ. ಅಧ್ಯಕ್ಷರೇ, ನಾಳೆ ಮುಂಜಾನೆ ನಾನು ಮಾತನ್ನು ಮುಂದುವರೆಸುವುದಕ್ಕೆ ಅವಕಾಶ ಕೊಡಿ.

ಅಧ್ಯಕ್ಷರು.—ಸದನವನ್ನು ನಾಳೆ ಬೆಳಿಗ್ಗೆ ೧೦ ಗಂಟೆಗೆ ಮುಂದೂಡಲಾಗಿದೆ.

(ಸದನವು ೫ ಗಂಟೆ ೫೫ ನಿಮಿಷಕ್ಕೆ ಮುಕ್ತಾಯಂಮಾಗಿ, ಪುನಃ ದಿನಾಂಕ ೭ನೇ ಜೂನ್ ೧೯೬೯ರ ಮಂಗಳವಾರದಂದು ೧೦ ಗಂಟೆಗೆ ಸೇರಲು ತೀರ್ಮಾನಿಸಿತು.)